ಲಕ್ಕ ಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಅನಧಿಕೃತ ಮನೆಗಳು

**894- ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

*ಅ) ಲಕ್ಕಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಹಲವಾರು ಅನಧಿಕೃತ ಮನೆಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ರಸ್ತೆಯ ಮೇಲ್ಭಾಗದಲ್ಲಿ ಬಂದಿರುವ ಅನಧಿಕೃವಾಗಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು?*

*ಇ) ಈ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವೇನು?*

*ಈ) ರಸ್ತೆಯ ಮೇಲ್ಭಾಗದಲ್ಲಿ ಕಟ್ಟಿರುವ ಅನಧಿಕೃತ ಮನೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು

ಈ) ಅದೇ

**ಅನುಮತಿಯಿಲ್ಲದೆ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿರುವ ಬಗ್ಗೆ**

895-ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಖಾಸಗಿ ವ್ಯಕ್ತಿಯೊಬ್ಬರು ಬೆಂಗಳೂರು ನಗರಪಾಲಿಕೆಯ ಅನುಮತಿ ಪಡೆಯದೇ ಬಿಸಿ ಮಿಶ್ರಣ ಯಂತ್ರವನ್ನು ಜಯನಗರ ಕ್ಷೇತ್ರದ ಸುದ್ದಗುಂಟೆ ಪಾಳ್ಯಕೆರೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ಬಿಸಿಮಿಶ್ರಣ ಯಂತ್ರವನ್ನು ನಡೆಸುತ್ತಿರುವವರು ಯಾರು?*

*ಇ) ಈ ಯಂತ್ರದಿಂದ ಹೊಸಬರುವ ಹೊಗೆಯ ಪರಿಸರವನ್ನು ಕಲುಷಿತಗೊಳಿಸುವುದಲ್ಲದೆ ಆ ಸುತ್ತಮುತ್ತಲಿನ ಜನರಿಗೆ ಹೊಸತರವಾದ ರೋಗಗಳು ಹರಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಹಾಗಿದ್ದಲ್ಲಿ, ಈ ಕಾನೂನು ಬಾಹಿರ ಯಂತ್ರಸ್ಥಾವರವನ್ನು ತೆಗೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ನಗರಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರಾದ ಶ್ರೀ ಚಂದ್ರಶೇಖರ್ ಎಂಬುವವರು ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿದ್ದರು.

ಇ) ಹೌದು.

ಈ) ಈ ಬಿಸಿ ಮಿಶ್ರಣ ಯಂತ್ರವು ಒಂದು ವರ್ಷದಿಂದ ಈ ಸ್ಥಳದಲ್ಲಿರುತ್ತದೆ. ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸದ ಹಾಗೆ ನಿಲ್ಲಿಸಲಾಗಿದೆ. ಈ ಯಂತ್ರವನ್ನು ಕೂಡಲೇ ನಗರಸಭೆಯ ಜಾಗದಿಂದ ತೆಗೆಯಲು ಗುತ್ತಿಗೆದಾರರಿಗೆ ತೀವ್ರವಾದ ಎಚ್ಚರಿಕೆ ನೀಡಲಾಗಿದೆ. ಇದರ ಪ್ರಕಾರ ಗುತ್ತಿಗೆದಾರರು ಯಂತ್ರವನ್ನು ಬೇರೆ ಕಡೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಹಾಗೂ ಈ ಯಂತ್ರವನ್ನು ಜನವರಿ 93ರ ಒಳಗಾಗಿ ಸ್ಥಳಾಂತರಿಸಲಾಗುವುದು.

**ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳ ಸಂಖ್ಯೆ**

854Ë ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳಿಷ್ಟು? (ವಿವರ ನೀಡುವುದು):*

*ಆ) ಅವುಗಳಲ್ಲಿ ಪರಿಸಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹಾಸ್ಟೆಲ್‌ಗಳಿಷ್ಟು ಹಾಗೂ ಹಿಂದುಳಿದವರ ಹಾಸ್ಟೆಲ್ ಗಳಿಷ್ಟು(ವಿವರ ನೀಡುವುದು):*

*ಇ) ಈ ಮೇಲ್ಕಂಡ ಹಾಸ್ಟೆಲ್‌ಗಳ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆಯೇ ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು.*

*ಈ) ಈ ತಾಲ್ಲೂಕಿನಲ್ಲಿ ಇನ್ನು ಹಾಸ್ಟೆಲುಗಳ ಅವಶ್ಯಕತೆ ಇದೆಯೇ ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಸಮಾಜ ಕಲ್ಯಾಣ ಒಟ್ಟು ಇಲಾಖೆ

| | | | | | |
|---|---|---|---|---|---|
| ಮೆಟ್ರಿಕ್ ಪೂರ್ವ | ಬಾಲಕ | ಬಾಲಕಿಯರು | ಬಾಲಕ | ಬಾಲಕಿಯರು | |
| ಮೆಟ್ರಿಕ್ ಪೂರ್ವ | 1 | 1 | 6 | 4 | 12 |
| ಮೆಟ್ರಿಕ್ ನಂತರ | 1 | - | - | - | 1 |
| | 2 | 1 | 6 | 4 | 13 |

ಇ) 3 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಕಟ್ಟಡದ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಮುಂಬರುವ ಜೂನ್ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಅವಶ್ಯಕತೆಯನ್ನು ಗಮನಿಸಿ, ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

**ಸೇಡಂ ಪುರಸಭೆ ಕೊಳಚೆ ಪ್ರದೇಶ ಅಭಿವೃದ್ಧಿ ಕುರಿತು.**

867 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1990-91ನೇ ಸಾಲಿನಲ್ಲಿ ಸೇಡಂ ಪುರಸಭೆ ವ್ಯಾಪ್ತಿಯಲ್ಲಿರುವ 7 ಕೊಳಚೆ ಪ್ರದೇಶಗಳನ್ನು ಗುರುತಿಸಿರುವುದು ನಿಜವಲ್ಲವೆ?*

*ಆ) ಮೇಲ್ಕಂಡ ಸಾಲಿನಲ್ಲಿ ಸೇಡಂನಲ್ಲಿನ ಇಂದಿರಾನಗರದ ಅಭಿವೃದ್ಧಿಗಾಗಿ ಮೂರು ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದ್ದು, ಆದಷ್ಟು